# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 241 /2024

**ಸಾಕ್ಷಿಯನ್ನು ದಿಃ 19.11.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ. STK ವಕೀಲರಿಂದಃ**

ನಾನು 7ನೇ ತರಗತಿ ಓದಿದ್ದೇನೆ. ವ್ಯವಸಾಯ ಮಾಡುತ್ತೇನೆ. ಆರೋಪಿ ನನಗೆ 5 ವರ್ಷಗಳಿಂದ ಪರಿಚಯ. ಆರೋಪಿ ವ್ಯವಹಾರ ಮಾಡಬೇಕುಎಂದು ನನ್ನಿಂದ ಹಣ ಪಡೆದುಕೊಂಡಿದ್ದಾರೆ. 2024 ಫೆಬ್ರವರಿಯಲ್ಲಿ ಹಣ ಪಡೆದುಕೊಂಡಿದ್ದಾರೆ. ತಾರೀಖು ಗೊತ್ತಿಲ್ಲ. ನಾನು ಆರೋಪಿಗೆ ಹಣ ಕೊಟ್ಟ ಬಗ್ಗೆ ನೋಟೀಸ್ ನಲ್ಲಿ ಹೇಳಿದ್ದೇನೆ. ಮುಂದಿನ ದಿನಾಂಕದ ಚೆಕ್ಕನ್ನು ಕೊಟ್ಟಿದ್ದಾರೆಯೇ ಎಂದರೆ ಹೌದು. ಬರಬೇಕಾದ ಬಾಕಿ ಹಣಕ್ಕಾಗಿ ಚೆಕ್ ಕೊಡಬೇಕು ಎಂದು ಹೇಳಿದ್ದು ನಿಜವೇ ಎಂದರೆ ಹೌದು. ಚೆಕ್ಕನ್ನು ನಗಧೀಕರಣಕ್ಕಾಗಿ ಹಾಜರುಪಡಿಸಿದ್ದೇನೆ ಎನ್ನುವುದು ನಿಜವೇ ಎಂದರೆ ಹೌದು. ನಾನು ಮನೆಯಲ್ಲಿ ಹಣ ಕೊಟ್ಟಿದ್ದೇನೆ. ಹಣ ಕೊಡುವಾಗ ಬೇರೆಯಾರು ಇರಲಿಲ್ಲ. ನಗದಾಗಿ ಹಣ ಕೊಟ್ಟಿದ್ದೇನೆ. ರೂ.3 ಲಕ್ಷ ಕೊಟ್ಟಿದೇನೆ . ರೂ.500ರ ಮುಖಬೆಲೆಯ ನೋಟುಗಳನ್ನು ಕೊಟ್ಟಿದ್ದೇನೆ. ಒಟ್ಟು ಎಷ್ಟು ನೋಟುಗಳು ಇದ್ದವು ಎಂದರೆ ನೆನಪಿಲ್ಲ. ಆರೋಪಿ ನನಗೆ SBI byepass ರಸ್ತೆ ಶಾಖೆಯ ಚೆಕ್ಕು ಕೊಟ್ಟಿದ್ದಾರೆ. ಆರೋಪಿ ನನಗೆ ಬರೆದು ಚೆಕ್ ಕೊಟ್ಟಿದ್ದಾರೆ. ಚೆಕ್ ನೀಡಿದಾಗಲೇ ಚೆಕ್ ನಲ್ಲಿ ದಿನಾಂಕ ನಮೂದಿಸಿ ಕೊಟ್ಟಿದ್ದಾರೆ. ದಿನಾಂಕ 03.05.2024ನ್ನು ಚೆಕ್ ನಲ್ಲಿ ನಮೂದಿಸಿದ್ದಾರೆ. ಚೆಕ್ ಸಂಃ 593323.

ನಿಪಿ–1ರ ಚೆಕ್ಕಿನಲ್ಲಿ ಸಹಿ ಮತ್ತು ಉಳಿದ ಬರವಣಿಗೆಗಳು ವ್ಯತ್ಯಾಸದಿಂದ ಕೂಡಿವೆ ಎಂದರೆ ನನಗೆ ಗೊತ್ತಿಲ್ಲ. ಅವರೇ ಬರೆದುಕೊಟ್ಟಿದ್ದಾರೆ. ಆರೋಪಿ ಚೆಕ್ ಕೊಟ್ಟ ತಕ್ಷಣ ಬ್ಯಾಂಕ್ ಗೆ ಹಾಜರುಪಡಿಸಿದ್ದೇನೆ. ಚೆಕ್ ಹಾಜರುಪಡಿಸಿದ ಒಂದ ದಿನ ಬಿಟ್ಟು ಪುನಃ ಬ್ಯಾಂಕ್ ಗೆ ಹೋದೆ. ಚೆಕ್ ಅಮಾನ್ಯಗೊಂಡ ನಂತರ ಆರೋಪಿಯ ಬಳಿ ಮಾತನಾಡಿದ್ದಿರಾ ಎಂದರೆ ಮಾತನಾಡಿದ್ದೇನೆ. ಚೆಕ್ಕನ್ನು ಒಂದೇ ಬಾರಿ ನಗಧೀಕರಣಕ್ಕಾಗಿ ಹಾಜರುಪಡಿಸಿದ್ದೇನೆ.

(**ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆ ಮೇರೆಗೆ ಮುಂದೂಡಲಾಯಿತು**.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.